◆ ಹಿರಿಯ ರಂಗಕರ್ಮಿ, ಚಿತ್ರ ನಿರ್ದೇಶಕ ಮತ್ತು ನಿರ್ಮಾಪಕ ಸದಾನಂದ ಸುವರ್ಣರ ಜೊತೆ ನಿಮ್ಮದು ನಿಡುಗಾಲದ ನಂಟು. ಆ ಬಗ್ಗೆ ಕೊಂಚ ಹಂಚಿಕೊಳ್ಳುವಿರಾ? ಹಾಗೆಯೇ, ಶಿವರಾಮ ಕಾರಂತರೊಡನೆ ನಿಮ್ಮ ಒಡನಾಟ ಹೇಗಿತ್ತು?

ಸದಾನಂದ ಸುವರ್ಣರೊಂದಿಗಿನ ಸ್ನೇಹ ತುಂಬ ನಿಕಟವಾದುದು ಹಾಗೂ ಇಂದಿಗೂ ಕಡಿಯದೆ ಹಸಿರಾಗಿರುವುದು. ಮುಂಬಯಿಯ 'ಕನ್ನಡ ಕಲಾಕೇಂದ್ರ'ದ ಕಾರ್ಯಕಾರಿ ಸಮಿತಿಯಲ್ಲಿ ನಾವಿಬ್ಬರೂ ಇದ್ದೆವು. ಅವರು 'ಕೇಂದ್ರ'ದ ಉಪಾಧ್ಯಕ್ಷರಾಗಿದ್ದರು. ಮೊದಲು ಸ್ನೇಹಪೂರ್ವಕವಾಗಿ ನಾಟಕ ಬರೆಯಲು ವಿನಂತಿಸಿದಾಗ ಬಡಪೆಟ್ಟಿಗೆ ನಾನು ಜಗ್ಗಲಿಲ್ಲ. ಕಡೆಗೂ ಅವರು ಗೆದ್ದೇ ಬಿಟ್ಟರು. ಯಕ್ಷಗಾನದ ಹಿನ್ನೆಲೆಯಲ್ಲಿ 'ಡೊಂಕು ಬಾಲದ ನಾಯಕರು' ನಾಟಕ ಬರೆದೆ. ಇದು ಎಮರ್ಜೆನ್ಸಿಯ ಕಾಲದಲ್ಲಿ. ಕಡತೋಕಾ ಮಂಜುನಾಥ ಭಾಗವತರು ಹಾಗೂ ಹಿರಿಯ ವೇಷಧಾರಿ ಗೋವಿಂದ ಭಟ್ಟರ ಸಹಕಾರವೂ ಇತ್ತು. ನಾಟಕವನ್ನು ಸುವರ್ಣರು ನಿರ್ದೇಶಿಸಿ, ಹಿರಿಯ ನಟ ಎಂ.ಎನ್. ರಾಮಚಂದ್ರ ರಾವ್ ಮುಖ್ಯ ಪಾತ್ರವಹಿಸಿದ್ದರು. ನಾಟಕ ಯಶಸ್ವಿಯಾಗಿ ಮೂರು ಪ್ರದರ್ಶನ ಕಂಡಿತು. ಇದನ್ನು ಬರೆದುದು ನಾನಾದರೂ, ತಿದ್ದಿ ತೀಡಿ ಪ್ರದರ್ಶನ ಯೋಗ್ಯವಾಗುವಂತೆ ಮಾಡಿದವರು, ಸುವರ್ಣರು. ಅವರು ನನ್ನಿಂದ ಮತ್ತೆರಡು ನಾಟಕ ಬರೆಸಿದರು. ಅವುಗಳಲ್ಲಿ 'ಸಂಚು' ಸಪ್ಪೆ ಎನಿಸಿದರೆ ಸುವರ್ಣರ ನಿರ್ದೇಶನದಲ್ಲಿ 'ನಲ್ವತ್ತರ ನಲುಗು' ಅದ್ಭುತ ಯಶಸ್ಸು ಪಡೆಯಿತು. ಏಳೆಂಟು ಪ್ರದರ್ಶನಗಳಾದ ಬಳಿಕ ಸುವರ್ಣರೇ ಅದನ್ನು ಪ್ರಕಟಿಸಿದರು. ಆ ಬಳಿಕ ಮೋಹನ್ ಮಾರ್ನಾಡರ ನಿರ್ದೇಶನದಲ್ಲಿ ಅದು ಮೂರು ಪ್ರದರ್ಶನ ಕಂಡಿತು. ಸುವರ್ಣರು ಶಿವರಾಮ ಕಾರಂತರ ಕುರಿತಾದ ಸಾಕ್ಷ್ಯಚಿತ್ರ ತಯಾರಿಸುತ್ತಿದ್ದಾಗ ಅವರಿಗೆ ಸಹಾಯಕನಾಗಿ ಕೆಲಸ ಮಾಡಿದ ಅನುಭವ ಅಪೂರ್ವ ಎನ್ನಬೇಕು.

ಶಿವರಾಮ ಕಾರಂತರು ಆಗ ನಾನು ಬಯೋಕೆಮಿಸ್ಟ್ರಿಯ ಟ್ಯೂಟರ್ ಎಂದು ಕೆಲಸ ಮಾಡುತ್ತಿದ್ದ ಮಣಿಪಾಲದ ಕಸ್ತೂರಬಾ ಮೆಡಿಕಲ್ ಕಾಲೇಜಿನ ಕನ್ನಡ ವಿದ್ಯಾರ್ಥಿಗಳು ಭರ್ಜರಿಯಾಗಿ ಹಮ್ಮಿಕೊಂಡಿದ್ದ ದಸರಾ ಸಾಂಸ್ಕೃತಿಕೋತ್ಸವಕ್ಕೆ ಮುಖ್ಯ ಅತಿಥಿಯಾಗಿ ಬಂದಿದ್ದರು. ಆಗ ವಿದ್ಯಾರ್ಥಿಗಳ ಒತ್ತಾಯದ ಮೇರೆಗೆ ಸಂಯೋಜಕನಾದ ನಾನು ಹೆದರಿಯೇ ಅವರಿಗೆ ಪತ್ರ ಬರೆದು, ಕಾಲೇಜಿನ ಸ್ಥಾಪಕರಾದ ಮಾಧವ ಪೈಗಳಿಗೆ ಫೋನ್ ಮಾಡುವಂತೆ ವಿನಂತಿಸಿದ್ದೆ. ಆ ಸಮಯದಲ್ಲಿ ಪುತ್ತೂರಿನಲ್ಲಿದ್ದ ಕಾರಂತರು ಬರುವುದಾಗಿ ಒಪ್ಪಿ, ನನಗೆ ಕಾರ್ಡು ಕಳಿಸಿದರು, ಹಾಗೂ ಸಮಾರಂಭಕ್ಕೆ ಬಂದರು. ನಮ್ಮ ವಿದ್ಯಾರ್ಥಿನಿಯರು ಒಂದು ನೃತ್ಯ ಕಾರ್ಯಕ್ರಮ ಇರಿಸಿಕೊಂಡು, ಅದಾಗಲೇ ಮರಿ ಸಾಹಿತಿ ಎಂದು ಪ್ರಸಿದ್ಧನಾದ (!) ನನ್ನಿಂದ ನೃತ್ಯಕ್ಕೆ ಹಾಡು ಬರೆಸಿದ್ದರು. 'ಹೆಜ್ಜೆಯಲಿ ಹೆಜ್ಜೆ ಇಡುತ ಗೆಜ್ಜೆ ನಾದದೊಂದಿಗೆ ಬಂತು ದಸರಾ' ಎಂದೇನೋ ಭಯಂಕರ ಪ್ರಾಸಬದ್ಧವಾಗಿ ಹಾಡು ಬರೆದಿದ್ದೆ. ಕಾರಂತರ ಮುಖ ಅಸಹನೆ ಸೂಸುತ್ತಿತ್ತು. ಅವರು ಈ ಕವಿತೆಯನ್ನು ಹೊಸೆದ ಮಹಾಕವಿ ಯಾರು ಎಂದು ಪೈಗಳನ್ನು ಕೇಳಿದರು. ಅವರು ನನ್ನತ್ತ ಬೊಟ್ಟು ಮಾಡಿದರು. "ನೀನು ಏನಾದರೂ ಬರಿ. ಕವಿತೆ ಮಾತ್ರ ಬರೆಯತಕ್ಕದ್ದಲ್ಲ," ಎಂದು ಹುಕುಂ ಹೊರಡಿಸಿದರು. ನಾನು ಸಪ್ಪೆ ಮೋರೆ ಮಾಡಿದೆ. ಕಣ್ಣೀರು ಹರಿಯುವುದೊಂದು ಬಾಕಿ. "ಬೇಜಾರಾಯ್ತನ? ನೀನು ಏನು ಬರೀತೀಯೋ ಅದನ್ನು ಮುಂದುವರಿಸು. ಕವಿತೆ ಗಿವಿತೆ ನಿಂಗೆ ಹೇಳಿ ಮಾಡಿಸಿದ್ದಲ್ಲ" ಎಂದು ತಮ್ಮ ವಿಶಿಷ್ಟ ಸಾಂತ್ವನದ ನಗು ಬೀರಿದರು. ಕಾರಂತರ ಸಲಹೆಯಂತೆ ಮುಂದೆ ನಾನು ಕವಿತೆ ಬರೆಯುವ ಗೋಜಿಗೆ ಹೋಗಲೇ ಇಲ್ಲ.

ಕೈಗಾ ಪರಮಾಣು ಶಕ್ತಿ ಸ್ಥಾವರದ ವಿರುದ್ಧ ಕಾರಂತರು ದೊಡ್ಡ ದನಿಯೆತ್ತಿದ್ದರು. "ಪರಮಾಣು ಶಕ್ತಿಯ ಶಾಂತಿಯುತ ಬಳಕೆ ಅರ್ಥವಿಲ್ಲದ್ದು" ಎನ್ನುವುದು ಅವರ ವಾದವಾಗಿತ್ತು. ಕೈಗಾ ಪರಮಾಣು ಶಕ್ತಿ ಸ್ಥಾವರದಿಂದ ಪರಮಾಣು ಶಕ್ತಿಯನ್ನು ವಿದ್ಯುತ್ ಉತ್ಪಾದನೆಗೆ ಬಳಕೆ ಮಾಡಲಾಗುತ್ತದೆಯೇ ಹೊರತು, 1.6 ಕಿ.ಮೀ. ದೂರದಲ್ಲಷ್ಟೇ ಜನ ವಾಸ್ತವ್ಯಕ್ಕೆ ಎಡೆ ಮಾಡಿಕೊಡುವುದಲ್ಲದೆ, ಕನಿಷ್ಠ